# ಶ್ರೀ ವಿಷ್ಣುತೀರ್ಥರು

*ಯಸ್ಯ ಪ್ರಚಂಡ ತಪಸಾ ಶ್ರುತಿ ಗೀತ ವೃತ್ತಿ:*
*ತುಷ್ಟೋ ಹರಿಃ ಕಿಲ ವಶಂ ವದತಾಮವಾಪ ।*
*ಶ್ರೀಮಧ್ವಸನ್ಮತ ಪಯೋನಿಧಿ ಪೂರ್ಣಚಂದ್ರಃ*
*ಶ್ರೀವಿಷ್ಣುತೀರ್ಥ ಮುನಿರಾಟ್ ಮುದಮಾತನೋತು॥*

ಯಾರ ಕಠಿಣ ತಪಸ್ಸಿನಿಂದ, ಶೃತಿಯಿಂದ ಪ್ರತಿಪಾದ್ಯ ಮಹಿಮೆಯುಳ್ಳ, ಸಂತುಷ್ಟನಾದ ಭಗವಂತನು ಪ್ರತ್ಯಕ್ಷನಾದನೋ ಅಂತಹ, ಮಧ್ವಮತವೆಂಬ ಸಮುದ್ರದಿಂದ ಬಂದ ಚಂದ್ರನಂತಿರುವ ಮುನಿಶ್ರೇಷ್ಠರಾದ ವಿಷ್ಣುತೀರ್ಥರು ನಮಗೆ ಆನಂದವನ್ನು ನೀಡಲಿ.

**ಶ್ರೀವಿಷ್ಣುತೀರ್ಥರು, ಮಾದನೂರು**



**ಕಾಲ – (ಕ್ರಿ.ಶ.1756-1806)**

# ಮಾದನೂರಿನ ವಿಷ್ಣುತೀರ್ಥರು

**ಅಂಶ** – ರುದ್ರದೇವರ ಅಂಶ ಎಂದು ಹಿರಿಯರು ಹೇಳುತ್ತಾರೆ

**ಜನ್ಮಸ್ಥಳ** – ಸಿದ್ದಾಪುರ (ಧಾರವಾಡ ಜಿಲ್ಲೆ ಸವಣೂರಿನಿಂದ **24** ಕಿಮೀ)

**ತಂದೆ** – ಬಾಳಾಚಾರ್ಯರು (ನರಹರಿ ಆಚಾರ್ಯರು)

**ತಾಯಿ** – ಭಾಗೀರತೀಬಾಯಿ

**ಜನನ** – ಕೃ.ಶ. **1756** (ಟೀಕಾಕೃತ್ಪಾದರ ಅನುಗ್ರಹದಿಂದ ಜನನ)

ಈಶ್ವರ ನಾಮ ಸಂವತ್ಸರ, ಶ್ರಾವಣ ಕೃಷ್ಣ ಅಷ್ಟಮಿ (ಕೃಷ್ಣಾಷ್ಟಮಿ)

**ಜನ್ಮನಾಮ** – ಜಯತೀರ್ಥ

**ವಿದ್ಯಾಭ್ಯಾಸ** – ಐಜಿ ವೆಂಕಟರಾಮಾಚಾರ್ಯರಿಂದ (ಶ್ರೀವ್ಯಾಸತತ್ತ್ವಜ್ಞರು)

**ಇವರಿಗಿದ್ದ ಇತರ ಹೆಸರುಗಳು** – ಅರಣ್ಯಕಾಚಾರ್ಯರು, ಅಡವಿಸ್ವಾಮಿಗಳು

**ಸನ್ಯಾಸಾಶ್ರಮ ಸ್ವೀಕಾರ** – ಕೃ.ಶ. **1794** (**40**ನೇ ವಯಸ್ಸಿನಲ್ಲಿ)

**ಆಶ್ರಮ ಗುರುಗಳು** – ಶ್ರೀ ಸತ್ಯವರ ತೀರ್ಥರು (ಉತ್ತರಾದಿಮಠ)

**ವೃಂದಾವನ ಪ್ರವೇಶ** – ಕೃ.ಶ. **1806** (ಮಾಘ ಬಹುಳ ತ್ರಯೋದಶಿ) (ಶಿವರಾತ್ರಿ)

**ವೃಂದಾವನಸ್ಥರಾದಾಗ ಅವರ ವಯಸ್ಸು** – ೫೧ ವರ್ಷ

**ವೃಂದಾವನ** – "ಕುಶ" ನದೀ ತೀರದ ಮಾದನೂರು

**ಆಶ್ರಮ ನಾಮ** – ವಿಷ್ಣುತೀರ್ಥರು,

**ಇವರ ಕಾರ್ಯಕ್ಷೇತ್ರ** – ಶೂರ್ಪ, ಧಾರವಾಡ, ಮುನಿವಳ್ಳಿ, ಮಾದನೂರು.

**ಇವರ ಪ್ರಮುಖ ಶಿಷ್ಯರು** – ಗೋಕಾವಿಯ ಅನಂತಾದ್ರಿ ಭೀಮಾಚಾರ್ಯರು, ಟೊಣಪಿ ಬಾಳಾಚಾರ್ಯರು, ಮೊರಬ ಶೇಷಾಚಾರ್ಯರು, ಮೊರಬ ರಾಮಾಚಾರ್ಯರು, ಕೌಜಲಗಿ ವೆಂಕಟಾಚಾರ್ಯರು, ಅಣ್ಣಿಗೇರಿಯ ಅಣ್ಣಾಚಾರ್ಯರು

**ಸಮಕಾಲೀನರು** – ಶ್ರೀಸತ್ಯಬೋಧತೀರ್ಥರು, ಶ್ರೀಸತ್ಯಸಂಧತೀರ್ಥರು, ಶ್ರೀಧೀರೇಂದ್ರತೀರ್ಥರು, ಶ್ರೀ ಜಗನ್ನಾಥದಾಸರು, ಗೋಪಾಲದಾಸರು ಸಮಕಾಲೀನರಲ್ಲದೆ ನಿಕಟವರ್ತಿಗಳಾಗಿದ್ದರು.

## ಪುರಂದರ ದಾಸರ ಪದದಿಂದ ವೈರಾಗ್ಯ –

ಒಂದಾನೊಂದು ದಿನ ಮಧ್ಯಾಹ್ನ ಜಯತೀರ್ಥರು ದೇಹಾಲಸ್ಯದಿಂದ ಮಂಚದಲ್ಲಿ ವಿಶ್ರಮಿಸುತ್ತಿದ್ದರು. ಅವರ ಧರ್ಮಪತ್ನಿಯು ಪಕ್ಕದಲ್ಲಿ ಕುಳಿತು ಪಾದಸೇವೆಯನ್ನು ಮಾಡುತ್ತಿದ್ದರು. ಸುತ್ತಲೂ ಇದ್ದ ನಿಲುವುಗನ್ನಡಿಗಳಲ್ಲಿ ತಮ್ಮ ಪ್ರತಿಬಿಂಬವನ್ನು ಅವಲೋಕಿಸುತ್ತಿರಲು, ಮನೆಯ ಬಳಿ ಭಿಕ್ಷೆಗಾಗಿ ಬಂದ ದಾಸಯ್ಯನೊಬ್ಬನು **ಶ್ರೀ ಪುರಂದರದಾಸರ ದೇವರನಾಮ –**

**ಮಂಚಬಾರದು, ಮಡದಿ ಬಾರಳು, ಕಂಚು ಕನ್ನಡಿ ಬಾರವು!**
**ಸಂಚಿತಾರ್ಥದ ದ್ರವ್ಯ ಬಾರದು, ಮುಂಚೆ ಮಾಡಿರೊ ಧರ್ಮವ।**
**ಗೋವಿಂದ ನಮೋ ಗೋವಿಂದ ನಾರಾಯಣಾ ।**
**ಗೋವರ್ದನ ಗಿರಿಯನೆತ್ತಿದ ಗೋವಿಂದ ನಮ್ಮ ರಕ್ಷಿಸು॥**

ಹಾಡತೊಡಿದಾಗ, ಅದರಿಂದ ಇಹಸುಖದ ಇತಿಮಿತಿಗಳನ್ನು ಮನಗಂಡ ಜಯತೀರ್ಥಾಚಾರ್ಯರು ತಮ್ಮ ಸುಖೀ ಜೀವನದ  ಬಾಳಿಗಾಗಿ ಪಶ್ಚಾತ್ತಾಪಪಟ್ಟು, ತತ್ಕ್ಷಣವೇ ತಮ್ಮ ಮಗನ ಮೇಲೆ ಸಂಸಾರ ಭಾರವನ್ನು ವಹಿಸಿ ಮನೆಯಿಂದ ಹೊರಟರು.  ಮತ್ತೆಂದಿಗೂ ಮಂಚ ಹತ್ತಲಿಲ್ಲ, ನಿಲುವುಗನ್ನಡಿ ನೋಡಲಿಲ್ಲ, ಯಾವ ದ್ರವ್ಯವನ್ನೂ ಮುಟ್ಟದೆ, ದಾನ ಮಾಡಿ ಅವಧೂತ ವೃತ್ತಿಯನ್ನು ಅನುಸರಿಸಿ ಹೊರಟರು.

ಒಮ್ಮೆ ಬದರೀಕಾಶ್ರಮಕ್ಕೆ ಹೊರಟಾಗ, ದಾರಿಯಲ್ಲಿ ಟೀಕಾಕೃತ್ಪಾದರು ಇವರನ್ನು ಸರ್ಪರೂಪದಲ್ಲಿ ಅಡ್ಡಗಟ್ಟಿದರು.  ಶೃತಿವಾಕ್ಯವಾದ "ಸ್ವಾಧ್ಯಾಯಪ್ರವಚನ ಏವೇತಿ ಮೌದ್ಗಲ್ಯ: ತದ್ಧಿತಪಸ್ತದ್ಧಿತಪ:" ಎಂಬಂತೆ ಶ್ರೀಮದಾಚಾರ್ಯ ಮತಪ್ರಚಾರ ಮತ್ತು ಪ್ರವಚನಾದಿಗಳೇ ತಮಗೆ ಸಾಧನ ಮಾರ್ಗವೆಂದುಕೊಂಡು, ಮುನಿವಳ್ಳಿ ಎಂಬ ಗ್ರಾಮದಲ್ಲಿ ನಿಂತು, ಗ್ರಂಥರಚನೆಯಲ್ಲಿ, ಪಾಠಪ್ರವಚನಗಳಲ್ಲಿ, "ಸುಮಧ್ವವಿಜಯ" ಪಾರಾಯಣದಲ್ಲಿ ನಿರತರಾಗಿ ಮಧುಕರವೃತ್ತಿಯಲ್ಲಿ ಜೀವಿಸಿದರು.

# ಮಾದನೂರಿನ ವಿಷ್ಣುತೀರ್ಥರು

**ಸ್ವಪ್ನ ಸೂಚಿತ ಬದರೀನಾರಾಯಣ** – ಸ್ವಪ್ನದಲ್ಲಿ ಇವರಿಗೆ ಶ್ರೀಬದರೀನಾರಾಯಣನ ದರ್ಶನವಾಗಿತ್ತು. ಒಂದು ಸ್ವಪ್ನಸೂಚಿತ ಸ್ಥಳದಲ್ಲಿ ಬದರೀನಾರಾಯಣನ ಶಿಲಾಮಯ ವಿಗ್ರಹವು ದೊರೆತು, ಅದು ಈಗಲೂ ಅವರ ವೃಂದಾವನದ ಮೇಲಿಟ್ಟು ಪೂಜಿಸಲ್ಪಡುತ್ತಿದೆ.

**ರಾಗ – ಆನಂದಭೈರವಿ : ತಾಳ – ಝಂಪೆ ತಾಳ**

ಅಡವಿ ಆಚಾರ್ಯರ ಅಡಿಯ ಪೊಂದಿದ ಜನರು
ಅಡಿಗಡಿಗೆ ಬಹುಪುಣ್ಯ ಪಡೆದು ಕೊಂಬುವರು । ಪ ।

ಪೊಡವಿಯಲಿ ಸಂಸಾರಮಡುವಿನಲಿ ಮುಣುಮುಣುಗಿ
ಬಡವರಂತತಿಬಾಯ ಬಿಡುವರಲ್ಲವರು । ಅ ಪ ।

ಪಂಚರತ್ನವ ಪಠಿಸಿ ಪಂಚಮೂರ್ತಿಗಳನ್ನು
ಮುಂಚೆ ತಿಳಿವರು ಈ ಪ್ರಪಂಚದಲ್ಲಿ
ಹಂಚಿಕೆಯಲಿ ಮತ್ತೆ ಪಂಚಭೇದವ ತಿಳಿದು
ಪಂಚಮಹಾಪಾಪಗಳ ಮುಂಚೆ ಕಳೆವವರು । ೧ ।

ಭಂಗ ಬಿಡಿಸುವ ಸುಧೆಯ ಮಂಗಳಾರ್ಥವ ತಿಳಿದು
ಅಂಗದಲಿ ಸುರಿವರು ಕಂಗಳೋದಕವ
ಮಂಗಳಾಂಗನ ಅಂತರಂಗದಲಿ ಸ್ಮರಿಸುತ್ತ
ಮುಂಗೈಯ ಮುದ್ರೆಗಳ ಧರಿಸುವರಿವರು । ೨ ।

ವಾಸುದೇವನ ದಾಸದಾಸರಾದೆವೆಂಬೊ
ಆಶೆಯಲಿ ಅವನ ಸಹವಾಸ ಬಯಸುವರು
ಶ್ರೀಸುಧಾರ್ಥಾನಂತಾದ್ರೀಶನಲ್ಲೆ ಭಕುತಿ
ಏಸು ಕಾಲಕು ಬಿಡದೆ ಬ್ಯಾಸರದೆ ಬೇಡುವರು । ೩ ।

12 ಆವರ್ತಿ ಶ್ರೀಮನ್ನ್ಯಾಯಸುಧಾ ಗ್ರಂಥವನ್ನು ಪಾಠ ಹೇಳಿ ಮಂಗಳ ಮಾಡಿಸಿದರು.

108 ಸಲ ಶ್ರೀಮನ್ನ್ಯಾಯಸುಧಾ ಮಂಗಳ ಮಾಡಿದರು

- ಕೇವಲ ಐವತ್ತು ವರ್ಷಗಳ ತಮ್ಮ ಜೀವಿತಾವಧಿಯಲ್ಲಿ ತಮ್ಮ ಗುರುಗಳಾದ ಶ್ರೀವ್ಯಾಸತತ್ತ್ವಜ್ಞರಂತೆ ನಾಲ್ಕು ಆಶ್ರಮವಾದ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ, ಈ ನಾಲ್ಕೂ ಆಶ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಕೀರ್ತಿ ಶ್ರೀಮಾದನೂರು ವಿಷ್ಣುತೀರ್ಥರದ್ದು.

## ವಿಷ್ಣುತೀರ್ಥರ ಬಗ್ಗೆ ಗ್ರಂಥಗಳು –

೧. ಅವರ ಪೂರ್ವಾಶ್ರಮದ ಪುತ್ರರಾದ ಕೃಷ್ಣಾಚಾರ್ಯರು – ಪಂಚರತ್ನ

೨. ಅವರ ಶಿಷ್ಯರಾದ ಗೋಕಾವಿ ಭೀಮಾಚಾರ್ಯರು – ಪಂಚರತ್ನ ಕನ್ನಡಾನುವಾದ

೩. ಪಂಚರತ್ನಕ್ಕೆ "ಪ್ರಭಾ" ಎಂಬ ಸಂಸ್ಕೃತ ವ್ಯಾಖ್ಯಾನ

೪. "ಶ್ರೀ ವಿಷ್ಣುತೀರ್ಥವಿಜಯ"

೫. ಇವರ ಬಗ್ಗೆಯೇ ಹಲವಾರು ದೇವರ ನಾಮಗಳು ರಚನೆಯಾಗಿವೆ.

## ಶ್ರೀ ವಿಷ್ಣುತೀರ್ಥರ ಮಹಿಮೆಗಳು –

೧. ಸುಮಧ್ವವಿಜಯದ ಪಾರಾಯಣದ ಮೂಲಕ ಒಂದು ಸಾಮಾನ್ಯ ಪಾತ್ರೆಯನ್ನು ಬಂಗಾರದ ಪಾತ್ರೆಯಾಗಿರಿಸಿದ್ದು.

೨. ರಮಾಸ್ತೋತ್ರ ರಚನೆ ಮಾಡಿ ಭೀಕರ ಕ್ಷಾಮಕಾಲದಲ್ಲಿ ತಮ್ಮನ್ನು ಆಶ್ರಯಾಮಾಡಿದವರನ್ನು ರಕ್ಷಿಸಿದರು.

೩. ಕಿನ್ವಾಳ ದೇಸಾಯರ ವಿಚಿತ್ರ ರೋಗವನ್ನು ಪರಿಹರಿಸಿದ್ದು

೪. ತಮ್ಮ ಮಗನಿಗೆ ಬಂದ ಅಪಮೃತ್ಯುವನ್ನು ಮೂರು ದಿನ ಉಪವಾಸವಿದ್ದು ಪರಿಹರಿಸಿದ್ದು

೫. ಇವರ ಪ್ರವಚನ ಕಾಲದಲ್ಲಿ ಶ್ರೀಟೀಕಾಕೃತ್ಪಾದರ ಆಗಮನ ಸೂಚನವಾಗಿ ದಿವ್ಯವಾದ ಪರಿಮಳ ಪಸರಿಸುತ್ತಿತ್ತಂತೆ

## ಮಾದನೂರು ವಿಷ್ಣುತೀರ್ಥರ ಗ್ರಂಥ ಪರಿಚಯ –

೧. **ಆಧ್ಯಾತ್ಮಾಮೃತರಸರಂಜನೀ –** ಶ್ರೀಮನ್ನ್ಯಾಯಸುಧಾಕ್ಕೆ ಟಿಪ್ಪಣಿ– ಇದರಲ್ಲಿ ಮನೋದೋಷ ನಿರಸನ ಪ್ರಕರಣ, ಧ್ಯಾನ ಪ್ರಕರಣ ಮತ್ತು ಸರ್ವ ಸಮರ್ಪಣ ಪ್ರಕರಣ ಎಂಬ ೩ ಪ್ರಕರಣಗಳಿವೆ.

**೨. ಬಿಂಬಸ್ತುತಿ**

**೩. ಮುಕ್ತಮಾಲಾ[ಗೀತಾಸಾರೋದ್ಧಾರ]**

**೪. ಶ್ರೀ ರಮಾಸ್ತೋತ್ರ –** ಭೀಕರ ಬರಗಾಲವಿದ್ದಾಗ ರಚಿಸಿದ ಸ್ತೋತ್ರ. ಪೂಜಾ ಕಾಲದಲ್ಲಿ ತಾಮ್ರದ ನಾಣ್ಯವನ್ನು ತಮ್ಮ ಆಸನದ ಕೆಳಗೆ ಇಡುತ್ತಿದ್ದರು. ಪೂಜೆಯ ನಂತರ ಅದು ಭಂಗಾರದ ನಾಣ್ಯವಾಗುತ್ತಿತ್ತು. ಇದರಿಂದ ಶಿಷ್ಯರ ಉದರ ಪೋಷಣೆಯಾಗುತ್ತಿತ್ತು.

**೫. ಸುಮಧ್ವವಿಜಯ ಪ್ರಮೇಯ ಫಲಮಾಲಿಕಾ – ಸುಮಧ್ವ ವಿಜಯದ ಮುಖ್ಯ ಪ್ರಮೇಯುಗಳೊಂದಿಗೆ ಪ್ರತಿಯೊಂದು ಸರ್ಗದ ಅಧ್ಯಯನದ ಫಲವಿಶೇಷ ನಿರೂಪಣೆ**

**೬. ನ್ಯಾಯಸುಧಾ ಸ್ತೋತ್ರ –** ಇದರಲ್ಲಿ 8 ಶ್ಲೋಕಗಳಿದ್ದು ಪ್ರತಿಯೊಂದು ಶ್ಲೋಕದಲ್ಲಿ **"ಶ್ರೀ ಜಯತೀರ್ಥ ಕೃತೌ ಪ್ರವಣ: ನ ಪುನರ್ಭವವಾಕ್ ಭವತೀತಿ ಮತಿರ್ಹಿ ಮಮ"** ಎಂದು ಹೇಳಲಾಗಿದೆ ಎಂದರೆ ಶ್ರೀ ಜಯತೀರ್ಥರ ಗ್ರಂಥಗಳಲ್ಲಿ ವಿಶೇಷ ಆಸಕ್ತಿಯುಳ್ಳವನಿಗೆ ಪುನ: ಸಂಸಾರಬಂಧವಿಲ್ಲ ಎಂದು ವಿಷ್ಣುತೀರ್ಥರ ದೃಢ ಅಭಿಪ್ರಾಯ.

**೭.** ಶ್ರೀ ಕೃಷ್ಣಾಷ್ಟಕ

೮. ಬಿಂಬಾರ್ಪಣವಿಧಿ

೯. ಭಾಗವತಧರ್ಮಸ್ತೋತ್ರ

೧೦. ಆತ್ಮಸುಖಬೋಧಿನೀ ಪತ್ರಿಕಾ

**೧೧. ಅಚ್ಯುತಾನಂತ ಸ್ತೋತ್ರ**

**೧೨. ಶ್ರೀ ಜಯತೀರ್ಥಾಷ್ಟಕ**

**೧೩. ಶ್ರೀ ಜಯತೀರ್ಥಸ್ತೋತ್ರ**

**೧೪. ಉಪದೇಶ ಸ್ತೋತ್ರ**

**೧೫. ಆಜ್ಞಾಪತ್ರ** – ಇದನ್ನು ತಮ್ಮ ಶಿಷ್ಯರಾದ ಗೋಕಾವಿಯ ಅನಂತಾದ್ರಿ ಭೀಮಾಚಾರ್ಯರನ್ನು ಉದ್ದೇಷಿಸಿ ರಚಿಸಿದ್ದರೂ ಅದರ ವಿಷಯ ಸರ್ವರಿಗೂ ಅನ್ವಯಿಸುತ್ತದೆ. ಇದರಲ್ಲಿ ದಿನದ 60 ಘಳಿಗೆಗಳನ್ನು ವಿನಿಯೋಗಿಸುವ ಕ್ರಮವನ್ನು ವಿವರಿಸಲಾಗಿದೆ. ಶಾಸ್ತ್ರ ವ್ಯಾಸಂಗಕ್ಕೆ 34 ಘಳಿಗೆ, ನಿದ್ರೆಗೆ 14 ಘಳಿಗೆ (5 ತಾಸು ಅರ್ಧ ಘಂಟೆ)

**೧೬. ಷೋಡಶೀ –** 16 ಪ್ರಕರಣಗಳಲ್ಲಿ ಶಾಸ್ತ್ರ ಪ್ರಮೇಯಗಳನ್ನು ವಿವರಿಸಿದ್ದಾರೆ

**೧೭. ಚತುರ್ದಶೀ –** 14 ಪ್ರಕರಣಗಳಲ್ಲಿ ಶಾಸ್ತ್ರ ಪ್ರಮೇಯಗಳನ್ನು ವಿವರಿಸಿದ್ದಾರೆ.

**೧೮. ಶ್ರೀಮದ್ಭಾಗವತ ಸಾರೋದ್ಧಾರ –** ಸಾರಭೂತವಾದ ಭಾಗವತದ ಮುಖ್ಯ ಅಂಶಗಳನ್ನು 30 ಪ್ರಕರಣಗಳಲ್ಲಿ ವಿಭಾಗಿಸಿ ಅವುಗಳನ್ನು ಮೂಲ ಭಾಗವತದ 367 ಶ್ಲೋಕಗಳಿಂದ ವಿವರಿಸಿದ್ದಾರೆ. ಶ್ಲೋಕಗಳಿಗೆ ತಾವೇ ವ್ಯಾಖ್ಯಾನ ಮಾಡಿದ್ದಾರೆ.

**೧೯. ನ್ಯಾಯಸುಧಾ ಟಿಪ್ಪಣಿ**

**೨೦. ಶ್ರೀಮದ್ಭಾಗವತ ಧೃತಸಾರ**

**೨೧. ಧ್ಯಾನಸ್ನಾನ ವಿಧಿ**

**(Source– Maadanooru Shri Vishnutheertha Seva Prathishtaana Trust(R), Bangalore)**